ಮಂಜೂರಾಗಿರಲಿಲ್ಲ. ಎಲ್ಲೆಡೆ ಪರಿಸ್ಥಿತಿ ಬಹಳ ಬಿಗುವಾಗಿತ್ತು.

ಕ್ಯಾಂಪುಗಳಿಂದ ಜೀವಂತವಾಗಿ ಮರಳಿಬಂದವರು ಯಾಕಾದರೋ ಬದುಕಿ ಬಂದೆವೋ ಎಂದುಕೊಳ್ಳುವಂತಾಗಿತ್ತು. ಅವರಿಗೆ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಒಂದೆಡೆ ನೆಲೆ ಬೇಕಿತ್ತು. ಆ ಮಕ್ಕಳಿಗೆ ಮತ್ತೆ ಬದುಕಲ್ಲಿ ಭರವಸೆ ಬೇಕಿತ್ತು. 'ಜೀವ ಬೆದರಿಕೆ ಇರುವ ವ್ಯಕ್ತಿ ತಾನು ಸುರಕ್ಷಿತ ಅಂದುಕೊಂಡಲ್ಲಿ ಹೋಗಿ ಬದುಕು ಕಟ್ಟಿಕೊಳ್ಳುವ ಅವಕಾಶವಿರಬೇಕು. ಗಡಿಗಳ ಹಂಗಿಲ್ಲದೆ ಮನುಷ್ಯ ಸ್ವತಂತ್ರವಾಗಿ ಓಡಾಡುವಂತಿರಬೇಕು' ಎನ್ನುವ ನಂಬಿಕೆ. ಹಾಗಾಗಿ ಇವರಿಗಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಲು ಒಪ್ಪಿಕೊಂಡೆ.

★★★

ಪ್ರತ್ಯೇಕ ಯಹೂದಿ ರಾಷ್ಟ್ರವೊಂದರ ಹೋರಾಟ ತೀವ್ರವಾಯಿತು. ಫ್ರಾನ್ಸಿನಲ್ಲೇ ಫ್ರೆಂಚ್ ಹಾಗೂ ಫ್ರಾನ್ಸ್ ಅಲ್ಜೀರಿಯ ಮುಸ್ಲಿಂರ ನಡುವಿನ ತಾರತಮ್ಯ ಕಣ್ಣಿಗೆ ರಾಚುವಂತಿತ್ತು. ಜಿಯೋನಿಸಂ(ಯಹೂದಿಗಳಿಗಾಗಿ ಪ್ರತ್ಯೇಕ ರಾಷ್ಟ್ರನಿರ್ಮಾಣಕ್ಕಾಗಿ ನಡೆದ ಹೋರಾಟ) ತೀವ್ರ ಸ್ವರೂಪ ಪಡೆದು ಕೊಂಡಿತು. ಈ ಹೋರಾಟಗಾರರಿಗೆ ನೆರವು ನೀಡಿದೆ. ಒಮ್ಮೆ ಪ್ರತ್ಯೇಕ ಯಹೂದಿ ರಾಷ್ಟ್ರಕ್ಕೆ ಅಡ್ಡಿಪಡಿಸುತ್ತಿದ್ದ ಬ್ರಿಟಿಷ್ ವಿದೇಶ ವ್ಯವಹಾರಗಳ ಮಂತ್ರಿಯನ್ನು ಕೊಲ್ಲುವ ಸಂಚು ರೂಪಿಸಿದರು. ಇದಕ್ಕೆ ಅಗತ್ಯವಿದ್ದ ಬಾಂಬನ್ನು ತಯಾರಿಸಲು ನನಗೆ ಕೇಳಿದರು. ಹತ್ಯೆ, ಭಯೋತ್ಪಾದನೆಗಳಿಗೆ ನನ್ನ ವಿರೋಧವಿತ್ತು. ಆದರೂ ಕಡೆಗೆ ಒಪ್ಪಿ ಬಾಂಬನ್ನೇ ತಯಾರಿಸಿದೆ. ಆದರೆ ಅದು ಸ್ಫೋಟಗೊಳ್ಳದೆ ವಿಫಲವಾಗುವಂತೆ ಮಾಡಿದ್ದೆ. ಅಂತೂ 1948ರಲ್ಲಿ ಇಸ್ರೇಲ್ ರಾಷ್ಟ್ರ ನಿರ್ಮಾಣಕ್ಕೆ ಒಪ್ಪಿಗೆ ಸಿಕ್ಕು ಈ ಹೋರಾಟಗಾರರು ಯಶಸ್ಸು ಕಂಡರು.

★★★

'ಅಂದರೆ ನಿನ್ನ ಪ್ರಕಾರ ಯಾವುದರ ನಕಲಿಯನ್ನು ಬೇಕಾದರೂ ಮಾಡಬಹುದು ಅಲ್ವಾ?' ಎಂದು ಫ್ರೆಂಚ್ ತತ್ವಶಾಸ್ತ್ರಜ್ಞ, ಪತ್ರಕರ್ತ ಫ್ರಾನ್ಸಿಸ್ ಬ್ರೆಜಿಲ್‌ನ ವೀಸಾವನ್ನು ಪರೀಕ್ಷಿಸುತ್ತಾ ಕೇಳಿದ.

'ಒಬ್ಬ ಮನುಷ್ಯ ಸೃಷ್ಟಿಸಿದ್ದನ್ನ ಮತ್ತೊಬ್ಬ ಖಂಡಿತವಾಗಿ ಸೃಷ್ಟಿಸಬಹುದು' ಅಂದೆ.

'ನಾಳಿದ್ದರೊಳಗೆ ನಮಗೆರಡು ಸ್ವಿಸ್ ಪಾಸ್‌ಪೋರ್ಟ್ ಬೇಕು' ಅಂದು ಪಾಸ್‌ಪೋರ್ಟ್ ಮಾದರಿಯನ್ನ ನನ್ನ ಮುಂದಿಟ್ಟ.

ಸ್ವಿಸ್ ಪಾಸ್‌ಪೋರ್ಟ್‌ಗಳನ್ನು ನಕಲಿಸಲು ಸಾಧ್ಯವೇ ಇಲ್ಲ ಅಂತ ಅದು ಪ್ರಸಿದ್ಧವಾಗಿತ್ತು. ಇಲ್ಲಿಯವರೆಗೆ ನನ್ನ ಹತ್ತಿರ ಈ ಪಾಸ್‌ಪೋರ್ಟ್ ಬಂದಿರಲಿಲ್ಲ. ಹಾಗಾಗಿ ಅದಕ್ಕೆ ಸಂಬಂಧಿಸಿದ ಯಾವ ವಿವರಗಳೂ ಗೊತ್ತಿರಲಿಲ್ಲ. ಅದರ ಪೇಪರ್, ಬಳಸಿದ್ದ ಇಂಕ್, ವಿನ್ಯಾಸ ಎಲ್ಲವನ್ನೂ ವಿವರವಾಗಿ ಪರಿಶೀಲಿಸಬೇಕಿತ್ತು. ನನಗಿದ್ದ ಸಮಯ ಬಹಳ ಕಡಿಮೆ. ಅವರು ಬಳಸಿದ್ದ ಪೇಪರ್ ಹೇಗೆ ಮಾಡಬಹುದು ಎನ್ನುವುದನ್ನು ಯೋಚಿಸುತ್ತಲೇ ಒಂದಿಡೀ ದಿನ ಕಳೆದುಹೋಗಿತ್ತು. ಏನೇನೋ ಯತ್ನಿಸಿದೆ. ಯಾವುದೂ ಪ್ರಯೋಜನವಾಗಲಿಲ್ಲ. ಆಯಾಸದಿಂದ ಕಣ್ಣು ಮುಚ್ಚಿಕೊಳ್ಳುತ್ತಿತ್ತು. ಹಾಗೇ ಮಲಗಿದೆ. ನಿದ್ದೆಯಲ್ಲೂ ಬುದ್ಧಿ ಜಾಗೃತವಾಗಿತ್ತು. ಪೇಪರಿನ ಬಗ್ಗೆಯೇ ಯೋಚಿಸುತ್ತಿತ್ತು. ಇದ್ದಕ್ಕಿದ್ದಂತೆ ಗಾಜ್ ಬ್ಯಾಂಡೇಜುಗಳು ಇದಕ್ಕೆ ಪರಿಹಾರವೆಂದು ಹೊಳೆಯಿತು. ನಿದ್ದೆಯಲ್ಲೇ ಪೇಪರ್ ಪಲ್ಪಿನಲ್ಲಿ ಸೂಕ್ತ ಪ್ರಮಾಣದಲ್ಲಿ ಈ ಬ್ಯಾಂಡೇಜುಗಳನ್ನು ಮಿಶ್ರಣಮಾಡಿ ಒಣಗಿಸಿದಾಗ ನನಗೆ ಬೇಕಿದ್ದ ಪೇಪರ್ ಸೃಷ್ಟಿಯಾಗಿತ್ತು! ನಿದ್ದೆಯಿಂದ ಎದ್ದ ತಕ್ಷಣ ಅದನ್ನೇ ಮಾಡಿದೆ. ನಂಬಲಸಾಧ್ಯವಾದ ರೀತಿಯಲ್ಲಿ ಪಾಸ್‌ಪೋರ್ಟುಗಳು ತಯಾರಾಗಿದ್ದವು!

★★★